# ಕನಸುಗಳ ಸಾಕಾರಕ್ಕೆ ಹಾತೊರೆವ ಮನ



ರಷ್ಯಾದಿಂದ ಬಂದ ಮಜೀದ್-ವಾಫಾ ದಂಪತಿ.

ಅಗಾಧ ಜೀವನಾನುಭವ ಹೊತ್ತು ಬಳಿಕ ಬೆಂಗಳೂರಿಗೆ ಆತುಕೊಂಡವರು ರಷ್ಯಾ ಮೂಲದ ಮಜೀದ್ ಮತ್ತು ವಾಫಾ ದಂಪತಿ. ಕಳೆದ ಮೇ ತಿಂಗಳಲ್ಲಿ ಬೆಂಗಳೂರಿಗೆ ಬಂದರೂ ಈ ದಂಪತಿ ಇದಕ್ಕೂ ಮುನ್ನ ಕುವೈತ್, ದುಬೈ, ಅಬುದಾಬಿ, ಸೌದಿ ಅರೇಬಿಯಾದಲ್ಲಿ ಕೆಲಸ ಮಾಡಿದವರು. ಐದು ತಿಂಗಳ ಹಿಂದೆ ಬೆಂಗಳೂರಿಗೆ ಬಂದಿದ್ದರೂ ಈ ಕುಟುಂಬ ಇನ್ನೂ ಇಲ್ಲಿಯ ಬದುಕಿಗೆ ಸಂಪೂರ್ಣವಾಗಿ ಆತುಕೊಂಡಿಲ್ಲ.

'ನನ್ನ ಕುಟುಂಬದವರು ಮತ್ತು ಸ್ನೇಹಿತರು ಭಾರತದಲ್ಲಿ ಏನು ಮಾಡಬೇಕು ಮತ್ತು ಮಾಡಬಾರದು ಎಂಬ ದೊಡ್ಡ ಪಟ್ಟಿಯನ್ನೇ ನೀಡಿದ್ದಾರೆ. ಅದರಂತೆ ನಡೆದುಕೊಳ್ಳಲು ನನಗೆ ಸಾಕಷ್ಟು ಕಾಲಾವಕಾಶ ಬೇಕಾಗಿದೆ' ಎನ್ನುತ್ತಾರೆ ಮಜೀದ್.

ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ನಲ್ಲಿ ಪದವಿ ಪಡೆದ ಮಜೀದ್ ಈಗಾಗಲೇ ಹಲವು ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಈಗಾಗಲೇ ಇವರು ಗಳಿಸಿದ ಅನುಭವ ಯಾವುದೇ ಕಂಪೆನಿಯ ಆಡಳಿತ ನಿರ್ವಹಣೆಗೆ ಸಾಕು. ಸದ್ಯ ಮಜೀದ್ ಖಾಸಗಿ ಕಂಪೆನಿಯೊಂದರಲ್ಲಿ ಆಡಳಿತ ನಿರ್ವಹಣಾಧಿಕಾರಿಯಾಗಿದ್ದಾರೆ.

ಜೀವನದಲ್ಲಿ ಆದಷ್ಟು ಸ್ವತಂತ್ರವಾಗಿರುವುದೇ ಮಜೀದ್ ಅವರಿಗೆ ಇಷ್ಟವಂತೆ. ಯಾರ ಮೇಲೂ ಅವಲಂಬಿಸದೆ, ಯಾರ ಹಂಗೂ ಇಲ್ಲದೆ ಬದುಕುವುದು ಇವರಿಗೆ ಮೊದಲಿನಿಂದಲೂ ರೂಡಿಯಾಗಿದೆಯಂತೆ. ಈ ಮಾತಿಗೆ ಪುಷ್ಟಿ ನೀಡುವಂತೆ ಮಜೀದ್ ಹೇಳುವುದು ಹೀಗೆ. 'ನಾನು ಕಾಲೇಜು ದಿನಗಳಲ್ಲೂ ತಂದೆ ತಾಯಿಯರ ಬಳಿ ಪಾಕೆಟ್ ಮನಿ ಕೇಳುತ್ತಿರಲಿಲ್ಲ. ಏನಾದರೂ ಖರೀದಿಸಬೇಕಾದರೆ ನಾನೇ ಸ್ವತಃ ಕೆಲಸ ಮಾಡಿ ಹಣ ಸಂಪಾದಿಸಿ ಕೊಳ್ಳುತ್ತಿದ್ದೆ. ಬೆಂಗಳೂರಿಗೆ ಬರುವಾಗಲೂ ಅಷ್ಟೆ. ಹೆತ್ತವರ ಬಳಿ ಒಂದು ರೂಪಾಯಿಯನ್ನೂ ಕೇಳಲಿಲ್ಲ. ನನ್ನದೇ ದುಡಿಮೆ, ನನ್ನದೇ ಶ್ರಮದ ಹಣದಿಂದ ಖರ್ಚು ಮಾಡುವುದರಲ್ಲಿ ತೃಪ್ತಿ, ಮನಃ ಸಂತೋಷ ಇದೆ' ಎಂಬುದು ಇವರ ನಿಲುವು.

ಹಾಗೆ ನೋಡಿದರೆ ಮಜೀದ್ ಅವರದು ಅನುಕೂಲಸ್ಥ ಕುಟುಂಬವೇ. ಹೆತ್ತವರು ಉತ್ತಮ ಕೆಲಸದಲ್ಲಿದ್ದಾರೆ. ಅಣ್ಣ ಕಾನೂನು ಪದವೀಧರ ಜತೆಗೆ ಸಿರಿಯಾದಲ್ಲಿ ಒಳ್ಳೆ ಕೆಲಸದಲ್ಲಿದ್ದಾರೆ. ಅಕ್ಕಂದಿರು ಇಬ್ಬರೂ ಕಾಲೇಜು ಉಪನ್ಯಾಸಕಿಯರು. ಮಜೀದ್ ಮಾತ್ರ ಬಿಸಿನೆಸ್ ಕಡೆಗೆ, ಆಡಳಿತ ನಿರ್ವಹಣೆ ಕಡೆಗೆ ಒಲವು ತೋರಿದ್ದಾರೆ.

ಮಜೀದ್ ಕೆಲಸದ ನಿಮಿತ್ತ ಅನೇಕ ದೇಶ ಸುತ್ತಿದ್ದಾರೆ. ಬೆಂಗಳೂರಿಗೆ ಬರುವ ಮುನ್ನ ಸಿರಿಯಾದಲ್ಲಿದ್ದರು. ಅದಕ್ಕೂ ಮೊದಲು ಕತಾರ್, ಸೌದಿ ಅರೇಬಿಯಾ, ದುಬೈ, ಕುವೈತ್‌ಗಳಲ್ಲೂ ಕೆಲಸ ಮಾಡಿದ್ದಾರೆ.

ಸೌದಿ ಅರೇಬಿಯಾದಲ್ಲಿ ಬದುಕು ಬಹಳ ಕಠಿಣ. ಅಲ್ಲಿನ ನಿಯಮಾವಳಿಗಳು ಸ್ವತಂತ್ರ ಜೀವನ ನಿರ್ವಹಣೆಗೆ ಅಡ್ಡಿಯಾಗುತ್ತದೆ. ಅಲ್ಲಿ ಹೊರಗೆ ಪಾರ್ಟಿ ಮಾಡುವಂತಿಲ್ಲ, ಸ್ನೇಹಿತರೆಲ್ಲ ಸೇರಿ ಕುಡಿಯುವಂತಿಲ್ಲ. ಮಹಿಳೆಯರು ಒಂಟಿಯಾಗಿ ತಿರುಗಾಡುವಂತಿಲ್ಲ. ಇಂಥ ಸ್ವಾತಂತ್ರ್ಯರಹಿತ ಸನ್ನಿವೇಶದಲ್ಲಿ ಅಲ್ಲಿ ಬದುಕು ಸಾಗಿಸಿದ್ದೆ. ಬೆಂಗಳೂರಿಗೆ ಬಂದ ಮೇಲೆ ನನಗೆ ಸಾಕಷ್ಟು ಸ್ವಾತಂತ್ರ್ಯ ಸಿಕ್ಕಿದೆ. ಹೀಗಾಗಿ ನಾನು ನನ್ನ ಪತ್ನಿ ವಾಫಾ ಇಲ್ಲಿ ಖುಷಿಯಾಗಿದ್ದೇವೆ' ಎಂದು ತಮ್ಮ ಜೀವನಾನುಭವವನ್ನು ವಿವರಿಸುತ್ತಾರೆ ಮಜೀದ್.

'ಈ ನಗರದ ಪ್ರಮುಖ ಸಮಸ್ಯೆ ಎಂದರೆ ವಿಪರೀತ ಟ್ರಾಫಿಕ್. ಒಬ್ಬರೇ ಓಡಾಡಲು ಆಗದಂತಹ ಪರಿಸ್ಥಿತಿ. ಮಿತಿಮೀರಿದ ಜನದಟ್ಟಣೆ. ದಿನದ ಎಲ್ಲ ಹೊತ್ತಿನಲ್ಲೂ ರಸ್ತೆಯುದ್ದಕ್ಕೂ ವಾಹನ, ಜನ ಸಾಗರ. ಇದೊಂದೇ ಇಲ್ಲಿನ ಬೇಜಾರು' ಎಂದು ನಗರ ಜೀವನದ ಟ್ರಾಫಿಕ್ ಪಡಿಪಾಟಲನ್ನು ತೋಡಿಕೊಳ್ಳುತ್ತಾರೆ ವಾಫಾ.

## ಹಬ್ಬದ ಪುಳಕ

'ಹಬ್ಬಗಳ ಆಚರಣೆ ಮಟ್ಟಿಗೆ ಹೇಳುವುದಾದರೆ ಪ್ರತಿ ಹಬ್ಬವೂ ಸಂತಸದ ಕ್ಷಣ..ವೈವಿಧ್ಯಮಯ. ವರ್ಣರಂಜಿತ ಹಬ್ಬ ಸಂಸ್ಕೃತಿ, ಹೊಸ ಬಟ್ಟೆ, ಉಡುಗೊರೆ, ಸಿಹಿತಿಂಡಿ, ಅಲಂಕಾರ, ಶುಭಾಶಯ ವಿನಿಮಯ... ಎಲ್ಲವೂ ಆಪ್ಯಾಯಮಾನ. ದೀಪಾವಳಿಯಂತೂ ಪುಳಕ ತರುವ ಹಬ್ಬ. ಪಟಾಕಿ ಸದ್ದಿನ ಜತೆಗೆ ಬೆಳಕಿನ ಶೃಂಗಾರ. ಇಂಥ ವೈವಿಧ್ಯಮಯ ಹಬ್ಬಗಳ ಆಚರಣೆ ಜಗತ್ತಿನ ಬೇರೆ ಯಾವುದೇ ದೇಶಗಳಲ್ಲಿ ಇರಲಿಕ್ಕಿಲ್ಲ' ಎನ್ನುತ್ತಾರೆ ವಾಫಾ.

ವಾರಾಂತ್ಯದಲ್ಲಿ ಪತಿ ಪತ್ನಿ ಇಬ್ಬರೂ ನಗರದಲ್ಲಿ ಸುತ್ತಾಡುತ್ತಾರೆ. ಹೋಟೆಲ್‌ಗಳಲ್ಲಿ ಊಟ ತಿಂಡಿ ಸವಿಯುತ್ತಾರೆ. ಇಂದಿರಾನಗರದಲ್ಲಿರುವ ರೆಸ್ಟೋರೆಂಟ್‌ಗಳು ಇವರಿಗೆ ಪ್ರಿಯವಂತೆ. ಬಿಡುವಿದ್ದಾಗ ಪ್ರವಾಸವನ್ನೂ ಕೈಗೊಳ್ಳುವ ಇವರು ಈಗಾಗಲೇ ಆಗ್ರಾ, ಗೋವಾ, ಬಂಡೀಪುರ ಮುಂತಾದ ಪ್ರವಾಸಿ ತಾಣಗಳನ್ನು ನೋಡಿ ಬಂದಿದ್ದಾರೆ.

'ಕೇರಳದಲ್ಲಿ ಮನಸೆಳೆಯುವ ಅನೇಕ ಪ್ರವಾಸಿ ತಾಣಗಳಿವೆ ಎಂಬುದನ್ನು ಸ್ನೇಹಿತರು ಹೇಳಿದ್ದಾರೆ. ಸದ್ಯದಲ್ಲೇ ಅಲ್ಲಿಗೂ ಹೋಗಿ ಬರುವ ಪ್ಲಾನ್ ಇದೆ' ಎನ್ನುತ್ತಾರೆ ಮಜೀದ್ ಮತ್ತು ವಾಫಾ.

ಹೊಸ ಹುರುಪಿನಲ್ಲಿ, ಹುಮ್ಮಸ್ಸಿನಲ್ಲಿ ಬೆಂಗಳೂರಿಗೆ ಬಂದು ತಂಗಿದ್ದಾರೆ. ಇವರಲ್ಲಿ ಕನಸುಗಳು ನೂರಾರಿವೆ. ಇವೆಲ್ಲದರ ಸಾಕಾರಕ್ಕೆ ಹಾತೊರೆಯುತ್ತಾ ಬದುಕಿನ ಪಯಣ ಮುನ್ನಡೆಸುತ್ತಿದ್ದಾರೆ ಈ ದಂಪತಿ.

★ ಅವನೀಶ್